**<u>ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.</u>**

**<u>ಓ.ಎಸ್.ನಂ. 24/2021.</u>**

**ಡಿ ಡಬ್ಲ್ಯೂಃ 1**

**<u>ದಿನಾಂಕಃ 10-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಸ್.ಜೆ.ಪಿ. ವಕೀಲರಿಂದಃ</u>**

| | |
|---|---|
| ನಿಡಿ-2ಃ | ಮುಸ್ತಾಕಅಹ್ಮದ ರವರ ಮರಣ ಪ್ರಮಾಣ ಪತ್ರವನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ. |
| ನಿಡಿ-3ಃ | ಕನ್ನಪ್ಪ ಕೊಪ್ಪದ ರವರ ಮರಣ ಪ್ರಮಾಣ ಪತ್ರ. |
| ನಿಡಿ-4ಃ | ಉಮೇಶಗೌಡ್ರ ಪುಟ್ಟನಗೌಡ್ರ ಪಾಟೀಲರವರ ಮರಣ ಪ್ರಮಾಣ ಪತ್ರವನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ. |
| ನಿಡಿ-5ಃ | ಪಾರವ್ವ ಕೋಂ ಕರಬಸಪ್ಪ ಡವಗೇರ ರವರ ಮರಣ ಪ್ರಮಾಣ ಪತ್ರವನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ. |
| ನಿಡಿ-6ಃ | ಮಂಜುನಾಥ ಮಾಳಗಿರವರ ಮರಣ ಪ್ರಮಾಣ ಪತ್ರವನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ. |
| ನಿಡಿ-7ಃ | ಕನ್ನಪ್ಪ ಕೊಪ್ಪದ ರವರ ದಿನಾಂಕಃ 04.12.2014 ರಂದು ಮರಣ ಹೊಂದಿದ ಬಗೆಗಿನ ಮರಣ ಪ್ರಮಾಣ ಪತ್ರವನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ. |
| ನಿಡಿ-8ಃ | ಭೀಮವ್ವ ಗುಂಡನೇನಹಳ್ಳಿ ರವರ ಮರಣ ಪ್ರಮಾಣ ಪತ್ರವನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ. |
| ನಿಡಿ-9ಃ | ದಿನಾಂಕಃ05.11.2014 ರ ಕನ್ನಪ್ಪ ಕೊಪ್ಪದ ರವರ ಮರಣದ ವರದಿ ಕುರಿತು ನೀಡಿದ ಮಾಹಿತಿಯ ಧೃಡಿಕೃತ ನಕಲು. |

ನಿಡಿ-10ಃ ತಾಲೂಕು ಸಾರ್ವಜನಿಕ ಆಸ್ಪತ್ರೆ ಬ್ಯಾಡಗಿ ರವರು ನೀಡಿದ ರಿಜಿಸ್ಟರನ ಧೃಡಿಕೃತ ನಕಲು (2 ಹಾಳೆಗಳು).

ನಿಡಿ-11ಃ ತಾಲೂಕು ಸಾರ್ವಜನಿಕ ಆಸ್ಪತ್ರೆ ಬ್ಯಾಡಗಿ ರವರು ನೀಡಿದ ರಿಜಿಸ್ಟರನ ಧೃಡಿಕೃತ ನಕಲು (4 ಹಾಳೆಗಳು/8 ಪುಟಗಳು).

ಈ ಕಾರಣಗಳಿಗಾಗಿ ದಾವೆಯನ್ನು ವಜಾ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಡಿ.ಹೆಚ್.ಬಿ. ವಕೀಲರಿಂದಃ</u>**

ನನ್ನ ತಂದೆಯ ಹೆಸರು ಶಿವಪ್ಪ ಎಂದರೆ ಸರಿ. ನನ್ನ ತಾಯಿಯ ಹೆಸರು ಹಂಪವ್ವ ಎಂದರೆ ಸರಿ. ನಮ್ಮ ತಂದೆ-ತಾಯಿಗೆ 4 ಜನ ಗಂಡು ಮಕ್ಕಳು, ಓರ್ವ ಮಗಳು. ಸದರಿಯವರಲ್ಲಿ ನಾನೇ ದೊಡ್ಡವನು. 2 ನೇಯವನು 3 ನೇ ಪ್ರತಿವಾದಿ. ಆನಂತರ ಮೃತ ಮಲಕಪ್ಪ. ಸದರಿ ಮೃತ ಮಲಕಪ್ಪನ ಹೆಂಡತಿ ಹೆಸರು ಶಕುಂತಲಾ ಹಾಗೂ ಅವರ ಮಕ್ಕಳ ಹೆಸರು ಚೈತ್ರಾ ಮತ್ತು ಚೇತನಕುಮಾರ ಎಂದರೆ ಸರಿ. ಸದರಿಯವರು 4 ರಿಂದ 6 ನೇ ಪ್ರತಿವಾದಿಯಾಗಿದ್ದಾರೆ. ನನ್ನ ಇನ್ನೊರ್ವ ಸಹೋದರ ಕನ್ನಪ್ಪ ಎಂದರೆ ಸರಿ. ಸದರಿ ಕನ್ನಪ್ಪ 05.11.2014 ರಂದು ಮೃತ ಪಟ್ಟರು ಎಂದರೆ ಸಾಕ್ಷಿ 04.11.2014 ರಂದು ತೀರಿಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ಕನ್ನಪ್ಪ 05.11.2014 ರಂದು ತೀರಿಕೊಂಡಿದ್ದರೂ ಸಹ ಅವರು 04.11.2014 ರಂದು ತೀರಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

02. ಸದರಿ ಕನ್ನಪ್ಪರವರ ಹೆಂಡತಿಯ ಹೆಸರು ಪುಷ್ಪಾ ಎಂದರೆ ಸರಿ. ಸದರಿ ಪುಷ್ಪಾ ರವರು ದಿನಾಂಕಃ 11.08.2020 ರಂದು ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಕನ್ನಪ್ಪ ಮತ್ತು ಪುಷ್ಪಾರವರಿಗೆ ಶ್ರುತಿ ಎಂಬ ದತ್ತಕ ಮಗಳು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಕ್ಕನ ಹೆಸರು ಶಕುಂತಲಾ ಎಂದರೆ ಸರಿ. ಅವರು 1 ನೇ ಪ್ರತಿವಾದಿಯಾಗಿದ್ದಾರೆ. ಸದರಿ ನನ್ನ ಸಹೋದರ ಕನ್ನಪ್ಪರವರು ತೀರಿಕೊಂಡ ನಂತರ

ದಾವಾ ಸ್ವತ್ತಿನ ದಾಖಲೆಗಳಿಗೆ ಆತನ ಹೆಂಡತಿ ಪುಷ್ಪಾರವರ ಹೆಸರು ನಮ್ಮ ಹೆಸರುಗಳೊಂದಿಗೆ ಜಂಟಿಯಾಗಿ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

03. ದಾವಾ ಸ್ವತ್ತಿನ ದಾಖಲೆಗಳನ್ನು ನಾನು ಈ ದಾವೆಯನ್ನು ವಾದಿ ದಾಖಲಿಸುವ ಕಾಲಕ್ಕೆ ನೋಡಿರಲಿಲ್ಲ. ದಾವಾ ಸ್ವತ್ತಿನ ಎಲ್ಲ ದಾಖಲೆಗಳಲ್ಲಿ ಕನ್ನಪ್ಪರವರ ಹೆಂಡತಿ ಪುಷ್ಪಾರವರ ಹೆಸರು ನಮ್ಮ ಹೆಸರುಗಳೊಂದಿಗೆ ಜಂಟಿಯಾಗಿ ದಾಖಲಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆಯ 4 ಜನ ಗಂಡು ಮಕ್ಕಳ ಪೈಕಿ ಇಬ್ಬರು ತೀರಿಕೊಂಡಿದ್ದು ಅವರ ವಾರಸುದಾರರನ್ನು ಹಾಗೂ ಉಳಿದ ಇಬ್ಬರು ಗಂಡು ಮಕ್ಕಳನ್ನು ಹಾಗೂ ಓರ್ವ ಮಗಳನ್ನು ಈ ದಾವೆಯಲ್ಲಿ ಸೇರಿಸಲಾಗಿದೆ. ನಮ್ಮ ಮನೆತನಕ್ಕೆ ಸಂಬಂಧಿಸಿದ ಎಲ್ಲರನ್ನೂ ಈ ದಾವೆಯಲ್ಲಿ ಸೇರ್ಪಡೆ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಮನೆತನಕ್ಕೆ ಸಂಬಂಧಿಸಿದ ಎಲ್ಲ ಆಸ್ತಿಗಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-7 ಮರಣ ಪ್ರಮಾಣ ಪತ್ರವನ್ನು ನಾವು ಸೃಷ್ಟಿಸಿ ಹಾಜರು ಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-9 ನಾನೇ ಹಾಜರು ಪಡಿಸಿದ ದಾಖಲೆ ಎಂದರೆ ಸರಿ. ಸದರಿ ನಿಡಿ-9 ರಲ್ಲಿ ಮರಣ ಹೊಂದಿದ ಮಾಹಿತಿ ದಿನಾಂಕಃ 05.11.2014 ಎಂದು ಬರೆದಿದೆ ಎಂದರೆ ಸರಿ. ನಾನು ಹಾಜರು ಪಡಿಸಿದ ದಾಖಲೆ ಪ್ರಕಾರ ಸದರಿ ಕನ್ನಪ್ಪರವರು ದಿನಾಂಕಃ 05.11.2014 ರಂದು ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿ ದಿನಾಂಕಃ 04.12.2014 ರಂದು ತೀರಿಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ಕನ್ನಪ್ಪರವರು ದಿನಾಂಕಃ 04.12.2014 ರಂದು ತೀರಿಕೊಂಡಿರುತ್ತ-ರೆ ಎಂದು ಸುಳ್ಳು ದಾಖಲೆಗಳನ್ನು ಹಾಜರು ಪಡಿಸಿರುತ್ತೇವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.